ಬರೆಯುವ ಚಟಕ್ಕೆ ಬೀಳಬಾರದೆಂದು ಯೋಚಿಸುತ್ತಾನೆ. ಇಲ್ಲದಿದ್ದಲ್ಲಿ, ಅವರೂ ಸಹ ನನ್ನಂತೆಯೇ ತಮ್ಮ ಜೀವನವನ್ನು ತಾವೇ ಕೆರೆದು ಗಾಯ ಮಾಡಿಕೊಂಡು, ಜುಗುಪ್ಸೆಗೆ ಕಾರಣವಾಗುತ್ತಾರೆ ಎಂದು ಅವನಿಗೆ ಅನ್ನಿಸಿತು. ಆದರೆ ಈಗ ಇಷ್ಟು ದೂರ ಕ್ರಮಿಸಿದ ನಂತರ ಪಶ್ಚಾತ್ತಾಪ ಪಡುವುದರಿಂದ ಏನು ಉಪಯೋಗ? ನೋಡು ನೋಡುತ್ತಿರುವಂತೆಯೇ ಮದ್ಯ ಸೇವಿಸುವ ಅಭ್ಯಾಸವಾಗಿದ್ದರಿಂದ ಅವನ ಚೈತನ್ಯ ಮತ್ತು ನರನಾಡಿಗಳಲ್ಲಿ ಮದ್ಯದ ಅಮಲು ಮನೆ ಮಾಡಿಕೊಂಡಾಗ, ಇದರ ದುರ್ಗುಣಗಳನ್ನು ತಿಳಿದಿದ್ದರೂ ಅವನು ಮದ್ಯವನ್ನು ಸೇವಿಸಲೇಬೇಕಾಗುವುದು. ಈಗಲೂ ಸಹ ಅವನು ಭಾವನಾಜೀವಿಯಾಗಿ, ಬುದ್ಧಿಜೀವಿಯಾಗಿ ತನ್ನ ಕೋಣೆಯ ಉದ್ದ ನಿಲುವಿನ ಕನ್ನಡಿ ಎದುರು ನಿಂತಿದ್ದಾನೆ; ಆ ಕನ್ನಡಿಯಲ್ಲಿ ಕಾಣುವ ತನ್ನ ವ್ಯಗ್ರ ಮುಖವನ್ನು ನೋಡುತ್ತಿದ್ದಾನೆ. ಈಗ ಅವನು ಆ ಮುಖವನ್ನು ನೋಡಿದಷ್ಟೂ ತನ್ನ ಬಗ್ಗೆ ಸಹಾನುಭೂತಿಯ ಭಾವನೆಗಳು ಮೂಡಿ ಬಂದವು. ಆ ಕನ್ನಡಿಯ ಮುಖ ಮತ್ತೂ ಗಂಭೀರವಾಗಿ ಕಳವಳಗೊಳ್ಳುತ್ತಿತ್ತು. ಆ ನೋವಿನೊಂದಿಗೆ ಕನ್ನಡಿಯಲ್ಲಿ ಬಂಧಿಸಲ್ಪಟ್ಟ ಅವನ ಮಾನವೀಯ ಭಾವನೆಗಳು ಒಂದಾದ ಮೇಲೆ ಒಂದರಂತೆ ಅವನ ಮೇಲೆ ಮಳೆಗರೆದವು. ಆಗ ತಿರಸ್ಕಾರ ಮತ್ತು ಜುಗುಪ್ಸೆಗೆ ಪಾತ್ರನಾದ ಅವನು, ಆ ಮೂಲಕ ತನ್ನ ಸರಳತನವನ್ನು ಬಿಂಬಿಸುತ್ತಿದ್ದ. ಸರಳತೆಯನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಗಳು ತುಂಬಾ ಮೂರ್ಖರು ಎಂಬುದು ನಿಜ! ಸರಳತೆಯಿಂದಾಗಿ ಅವನು ಅನೇಕ ವರ್ಷಗಳಿಂದ ದುಃಖಿಯಾಗುತ್ತಿದ್ದಾನೆ ಎಂಬುದೂ ನಿಜವೇ. ಆದರೆ ದುಃಖಿಯಾಗಿದ್ದಾಗ್ಯೂ ಏನು ಮಾಡುವುದು? ಅವನು ತನ್ನ ಸ್ವಾಭಿಮಾನದಲ್ಲಿ ಬಂಧಿಯಾಗಿದ್ದು, ತನ್ನನ್ನು ಅಲ್ಲಿಂದ ಹೊರ ಬರುವಂತೆ ಮಾಡಲಾರ. ಅವನು ಅಲ್ಲಿ ಸದಾ ಅಸಹಾಯಕತೆಯಿಂದ, ನಿರ್ವಾಹವಿಲ್ಲದೆ ಇರುತ್ತಾನೆ.

ಈ ದ್ವಂದ್ವಗಳ ನಡುವೆ ಅವನು ಈ ಭೂಮಿಯಲ್ಲಿ ತನ್ನ ಅಸ್ತಿತ್ವದ ಬಗ್ಗೆ ಪ್ರಶ್ನಿಸುತ್ತಾನೆ ತಾನು ಈ ಗುಂಪಿನಲ್ಲಿ ಸಂವೇದನೆಯ ವ್ಯಕ್ತಿಯಾಗಿ ಹುಟ್ಟಲು ತನ್ನಿಂದೇನು ತಪ್ಪಾಯಿತು? ಒಂದು ಜೋಡಿ ಕಾಮುಕ ವ್ಯಕ್ತಿಗಳ ಕ್ಷಣಿಕ ಆವೇಗದಿಂದಾಗಿ ಈ ರೂಪದಲ್ಲಿ ಜನಿಸಿ, ದೀರ್ಘಾವಧಿಯವರೆಗೆ ಕಷ್ಟಗಳು, ಯಾತನೆಗಳನ್ನು ಸಹಿಸಿಕೊಳ್ಳುತ್ತಾ ತಾನು ಬದುಕಿರಬೇಕೆ?

ಆ ಕನ್ನಡಿಯ ಒಳಗಿನ ವ್ಯಕ್ತಿಯ ಬಗ್ಗೆ ಹೀಗೆ ವಿವೇಚಿಸುತ್ತಾ ಮತ್ತು ಯೋಚಿಸಿದ ನಂತರ ಅವನು ಈ ತೀರ್ಮಾನ ಮಾಡಿದ ಈಗ ಈ ವ್ಯಕ್ತಿಯನ್ನು ತನ್ನ ಕಥೆಯ ಮುಖ್ಯ ಪಾತ್ರ ಮಾಡಿ ಇವನ ಕಥೆಯನ್ನೂ ಬರೆಯಬೇಕು. ಹೀಗೆ ಯೋಚಿಸಿ, ಅವನನ್ನು ಪುಸಲಾಯಿಸಿ ಅವನ ಆತ್ಮವು ಒಪ್ಪಿಕೊಂಡದ್ದನ್ನು ಪೋಣಿಸುತ್ತಾ ಕಥೆಯನ್ನು ಬರೆಯಲು ಆರಂಭಿಸಿದ. ಮನುಷ್ಯನಲ್ಲಿ ಅನೇಕ ದೌರ್ಬಲ್ಯಗಳಿರುತ್ತವೆ. ಅವನು ಆ ವಿಷಯಗಳನ್ನೇ ಕಥೆಯಲ್ಲಿ ವರ್ಣಿಸಲು ಶೋಧನೆ ಮಾಡಲಾರಂಭಿಸಿದ. ಅವನೊಬ್ಬ ತುಂಬಾ ಅಸಹಾಯಕ ವ್ಯಕ್ತಿಯಾಗಿದ್ದ; ಅವನ ಪೌರುಷ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವುದನ್ನು ಹೊರತುಪಡಿಸಿ ಬೇರಾವ ಉಪಯೋಗಕ್ಕೂ ಬರಲಿಲ್ಲ. ತನ್ನ ಜೀವನದ ಬಗ್ಗೆ ಅವನು ಒಂದೊಂದಾಗಿ ವಿಚಾರ ಮಾಡುವ ಪ್ರಯತ್ನ ಮಾಡಿದ; ಅದು ಒಮ್ಮೆ ಜೇಡರ ಬಲೆಗೆ ಸಿಕ್ಕ ನೊಣದಂತೆ, ಮತ್ತೊಮ್ಮೆ ಹುಲಿಯ ಕೈಯಲ್ಲಿ ಸಿಲುಕಿದ ಮೃಗದಂತೆ ಕಂಡಿತು. ಕಥೆ ಬರೆಯುವಾಗ ಅಕಸ್ಮಾತ್ ಅಲ್ಲಿ ಅವನ ಹೆಂಡತಿ ಅವನೆದುರು ಬಾಯಿ ತೆರೆದುಕೊಂಡು ಬಂದು ನಿಂತಳು. ಅವನು ತನ್ನ ಅಸಹಾಯಕತೆಯಿಂದ ಖುದ್ದು ಬಲವಂತವಾಗಿ ಆಹಾರದ ತುತ್ತಾಗಿ ಆ ಬಾಯಿಯಲ್ಲಿ ಪ್ರವೇಶಿಸಲು ಆರಂಭಿಸಿದ. ಅವನು ತನ್ನ ಮನೆಯಲ್ಲಿ, ನೆರೆಹೊರೆಯಲ್ಲಿ ಅಥವಾ ಸಮಾಜದಲ್ಲಿ ಅದೆಷ್ಟು ತುಚ್ಛವಾಗಿ ಜೀವನವನ್ನು ಭೋಗಿಸುತ್ತಿದ್ದಾನೆ, ತನ್ನ ಕುಟುಂಬದಿಂದ ಅದೆಷ್ಟು ಉಪೇಕ್ಷಿತನಾಗಿದ್ದಾನೆ ಎಂಬ ವಿಷಯಗಳೂ ಕಥೆಯಲ್ಲಿ ಬರುತ್ತಿದ್ದವು. ಹೀಗೆ ಅವನು ಕಥೆಯನ್ನು ಬರೆದು ಅದನ್ನು ಒಮ್ಮೆ ಓದಿದ. ಕಥೆಯನ್ನು ಓದುವಾಗ ಪ್ರತಿಭಾ ಸಂಪನ್ನನಾದ ಅವನು ತನ್ನ ಮನೆ ಮತ್ತು ತನ್ನದೆಂದು ಹೇಳುವ ಈ ಸಮಾಜದಲ್ಲಿ ತುಚ್ಛನಂತಾದ ಎಂಬುದನ್ನು ಖುಷಿಯಿಂದ ಚಿತ್ರಿಸಿದ. ಈ ಖುಷಿ ಅವನೊಳಗೆ ಜಾಗೃತಗೊಂಡು ಅವನಿಗೆ ಆತ್ಮತೃಪ್ತಿ ಲಭಿಸಿತು. ಈ ಆತ್ಮತೃಪ್ತಿಯಲ್ಲಿ ಅವನಿಗೆ ಈ ಕಥೆ ಎಷ್ಟು ಹಿಡಿಸಿತೆಂದರೆ, ಕಥೆಯನ್ನು ಕೂಡಲೇ ಎಲ್ಲಿಗಾದರೂ ಕಳುಹಿಸುವ ಆಸೆಯೂ ಮೂಡಲಿಲ್ಲ. ಅದೆಷ್ಟೋ ದಿನಗಳ ನಂತರ ಮತ್ತೊಮ್ಮೆ ಆ ಕಥೆಯನ್ನು ಪುನರ್ ಪಠಿಸುವಾಗ ಅಲ್ಲಲ್ಲಿ ತಿದ್ದುಪಡಿ ಮಾಡುತ್ತಾ ಕಥೆಯನ್ನು ಮತ್ತೂ ಸರಿಪಡಿಸಬೇಕು ಎಂದು ಯೋಚಿಸಿದ. ನಂತರ ಅವನು ಕಥೆಯನ್ನು ಪ್ರಕಟಿಸುವ ಬಗ್ಗೆ ಮಾತ್ರ ಯೋಚಿಸಿದ.

ಅವನು ಆ ಕಥೆಯನ್ನು ಫೈಲಿನಲ್ಲಿಟ್ಟ. ಆದರೆ ಜೀವನ ಪ್ರತಿನಿತ್ಯ ಮಗ್ಗುಲನ್ನು ಹೊರಳಿಸುತ್ತಿತ್ತು. ಅವನೊಳಗಿನ ಆ ಕಥೆಯ ಬರವಣಿಗೆಯ ಸ್ವಾದವೂ ಕ್ರಮೇಣ ಮಂದವಾಯಿತು. ಜೀವನವನ್ನು ಹೊಸ ರೀತಿಯಲ್ಲಿ ಭೋಗಿಸುವ ನಿಟ್ಟಿನಲ್ಲಿ ಅವನು ಇನ್ನೊಂದು ಕಥೆಯನ್ನು ಮೆಲುಕು ಹಾಕುವಲ್ಲಿ ತನ್ನನ್ನು ತೊಡಗಿಸಿಕೊಂಡ.

ಒಂದು ಸಂಜೆ ಊಟದ ನಂತರ ಅವನ ಕಿರಿಯ ಮಗಳು ಅವನ ಸಮೀಪಕ್ಕೆ ಬಂದು ಹೇಳಿದಳು, 'ಅಪ್ಪಾ, ಈ ವರ್ಷವೂ ಸಾಹಿತ್ಯದ ಸ್ಪರ್ಧೆ ನಡೆಯುತ್ತಿದೆ. ಕಳೆದ ವರ್ಷ ನಾನೇ ಕಥೆಯನ್ನು ಬರೆದು ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ಹೀಗಾಗಿ ನನಗೆ ಒಂದೂ ಬಹುಮಾನ ಬರಲಿಲ್ಲ. ಈ ವರ್ಷದ ಸ್ಪರ್ಧೆಗೆ ಒಂದು ಒಳ್ಳೆಯ ಕಥೆಯನ್ನು ಬರೆದುಕೊಡಿ. ಈ ವರ್ಷ ಕಥೆಗೆ ಪ್ರಥಮ ಬಹುಮಾನ ಕ್ಕಿಟ್ಟಿರುವ ಪ್ರೈಸ್ ಮನಿಯನ್ನು ಹೇಗಾದರೂ ಮಾಡಿ ಪಡೆಯಬೇಕು'.

ಮಗಳ ಮಾತಿನಿಂದ ಅವನು ರೇಗಿದ. ತನ್ನ ಮಗಳು ತನಗೆ ಕಥೆಯನ್ನು ಬರೆದುಕೊಡಲು ಹೇಳಿದಳು ಎಂದು ರೇಗಲಿಲ್ಲ; ಪ್ರತಿಯಾಗಿ ಅವನ ಮಗಳೂ ಸಹ ಈಗ ಈ ಜಗತ್ತಿನಲ್ಲಿ ತನ್ನಂತೆಯೇ ಅವಮಾನ, ಅಗೌರವ ಮತ್ತು ಉಪೇಕ್ಷೆಯನ್ನು ಜೀವಮಾನವಿಡೀ ಅನುಭವಿಸಲು ಬಯಸುತ್ತಾಳೆಂದು ರೇಗಿದ. ಅವನು ಅಕಸ್ಮಾತ್ ತನ್ನ ಮಗಳಿಗೆ ಗದರಿಸಿದ, 'ನಿನ್ನ ಕಾಲೇಜಿನ ಪಾಠಗಳ ಬಗ್ಗೆ ಗಮನಕೊಡು, ನೀನು ಮನುಷ್ಯಳಾಗಬೇಕು. ನೀನು ಹಿಂದುಮುಂದು ಯೋಚಿಸದೆ ಕಥೆ ಮತ್ತು ಸಾಹಿತ್ಯಕ್ಕೆ ಧುಮುಕಿ ಮೂರ್ಖಳಾಗುವ ಪ್ರಯತ್ನವನ್ನು ಈಗಿನಿಂದಲೇ ಮಾಡುತ್ತಿದ್ದೀಯಾ? ಈಗ ವಿದ್ಯಾಭ್ಯಾಸದ ಬಗ್ಗೆ ಮಾತ್ರ ಗಮನಕೊಡು, ಮೊದಲು ಅದನ್ನು ಮುಗಿಸಿ ದೊಡ್ಡ ವ್ಯಕ್ತಿಯಾಗಲು ಪ್ರಯತ್ನಿಸು'.

ಅವನು ಆವೇಶದಲ್ಲಿ ಇಂಥ ಮಾತುಗಳನ್ನು ಹೇಳಿದ. ಸ್ವಲ್ಪ ಹೊತ್ತಿನ ನಂತರ ಎಚ್ಚೆತ್ತು ಮೌನ ವಹಿಸಿದ. ಕಾರಣ, ತನ್ನ ಮಗಳು ತನ್ನನ್ನೇ ಬೆರಳು ಮಾಡಿ ತನ್ನ ಕಾರ್ಯಗಳ ಬಗ್ಗೆಯೇ ಪ್ರಶ್ನೆ ಮಾಡಿದರೆ ತಾನೇನು ಉತ್ತರಿಸುವುದು? ಆಗ ಅವನ ಸ್ವಾಭಿಮಾನ, ತಾನು ಆಯ್ದುಕೊಂಡ ಜೀವನದಲ್ಲಿ ತಾನೇನೂ ಪ್ರಗತಿಯನ್ನು ಸಾಧಿಸಲಾಗಲಿಲ್ಲ, ತಾನು ಸದಾ ಪೌರುಷಹೀನನಾಗಿ ಮನೆ ಮತ್ತು ಸಮಾಜದಲ್ಲಿ ನಗೆಪಾಟಲಿನ ಪಾತ್ರವಾಗುಳಿದೆ ಎಂದು ಹೇಳಲು ಬಿಡಲಿಲ್ಲ. ಅವನ ಮಗಳು ಅದೇ ರಸ್ತೆಯಲ್ಲಿ ಸಾಗಿ ತನ್ನ ಜೀವನವನ್ನು ಹಾಳು ಮಾಡಿಕೊಳ್ಳುವುದು ಅವನಿಗೆ ಇಷ್ಟವಿರಲಿಲ್ಲ. ಹೀಗಾಗಿ, ಅವನು ಯಾವುದೇ ಪ್ರಶ್ನೆಯನ್ನು ಕೇಳಲು ಅವಕಾಶ ಕೊಡದೆ ತನ್ನ ಮಗಳಿಗೆ ಹೇಳಿದ, ಬೇರೆಯವರಿಂದ ಕಥೆಯನ್ನು ಬರೆಯಿಸಿಕೊಂಡು ಬಹುಮಾನ ಪಡೆಯಲು ಯೋಚನೆ ಮಾಡುತ್ತಿದ್ದೀಯಲ್ಲ, ನಿನಗೆ ನಾಚಿಕೆಯಾಗಬೇಕು!

ಅವನ ಮಗಳು ಈ ನಿಂದನೆಯನ್ನು ಕೇಳಿ ಅಲ್ಲಿಂದ ಹೊರಟು ಹೋದಳು. ತದನಂತರ ಅವನ ಮಗಳು ಅವನಿಗೆ ಮತ್ತೊಮ್ಮೆ ಕಥೆ ಬರೆದುಕೊಡುವಂತೆ ಆಗ್ರಹಿಸಲಿಲ್ಲ.

ಎರಡು ತಿಂಗಳುಗಳು ಕಳೆದಿದ್ದವು. ಈ ಘಟನೆಯನ್ನು ಅವನು ಸುಮಾರಾಗಿ ಮರೆತಿದ್ದ. ಆದರೆ ಒಂದು ದಿನ ಸಂಜೆ ಅವನ ಮಗಳು ಒಂದು ಲಕೋಟೆ ಮತ್ತು ಪ್ರಮಾಣಪತ್ರವನ್ನು ತನ್ನ ತಾಯಿಗೆ ತೋರಿಸುತ್ತಾ ಹೇಳುತ್ತಿದ್ದಳು,

'ಅಮ್ಮಾ, ನಾನಿವತ್ತು ಮೊದಲ ಬಹುಮಾನವನ್ನು ಪಡೆದಿದ್ದೇನೆ. ಹೇಗೋ ಮಾಡಿ ಈ ಸಲ ನಾನು ಪ್ರಥಮ ಬಹುಮಾನವನ್ನು ಪಡೆದೇ ಬಿಟ್ಟೆ'. ಆದರೆ ಆ ಬಹುಮಾನವನ್ನು ತೋರಿಸಲು ಅವನ ಮಗಳು ಅವನ ಬಳಿಗೆ ಬರಲಿಲ್ಲ. ಅವನೂ ಸಹ ಮಗಳಿಗೆ ಸಿಕ್ಕ ಬಹುಮಾನದ ಬಗ್ಗೆ ಯಾವುದೇ ಆಸಕ್ತಿಯನ್ನು ತೋರಲಿಲ್ಲ. ಆದರೆ ಅವಳ ತಾಯಿ ಹೇಳುತ್ತಿದ್ದಳು, 'ನೀನು ತುಂಬಾ ಒಳ್ಳೆಯದನ್ನು ಮಾಡಿದೆ! ಈಗ ನೀನೂ ಸಹ ನಿಮ್ಮಪ್ಪನಂತೆ ಮನೆ ಮತ್ತು ಮಕ್ಕಳೊಂದಿಗೆ ಸಂಪರ್ಕವಿಟ್ಟುಕೊಳ್ಳದಂತಾದೆ. ಅವನು ತನ್ನ ಹೆಂಡತಿಯ ಈ ಮಾತನ್ನು ಕೇಳಿ ಯಾವುದೇ ಪ್ರತಿಕ್ರಿಯೆಯನ್ನು ತೋರಲಿಲ್ಲ. ಮದುವೆಯಾದ ಕೆಲವು ವರ್ಷಗಳ ನಂತರ ಅವನ ಕಥೆ ಬರೆಯುವ ಆಸಕ್ತಿಯನ್ನು ಕಂಡು ಅವನ ಹೆಂಡತಿ ನೊಂದು ಒಮ್ಮೆ ಹೇಳಿದ್ದಳು, 'ನಿಮ್ಮ ಈ ಸಾಹಿತ್ಯ ಹದ್ದು ಮೀರಿತು. ಮನೆಯಲ್ಲಿ ಏನಾಗುತ್ತಿದೆ, ಮನೆ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ನಿಮಗೇನೂ ಆಗಬೇಕಿಲ್ಲ, ನೀವು ಸಾಹಿತ್ಯ ಸಾಹಿತ್ಯ ಎಂದು ಒಂದು ಮೂಲೆಯಲ್ಲಿ ಗಂಟು ಕಟ್ಟಿಕೊಂಡು ಕೂತಿರುತ್ತೀರ. ನಾನು ಮಾಡುವುದೆಲ್ಲವೂ ಮನೆಯ ಒಳಿತಿಗಾಗಿಯೇ ಮಾಡುತ್ತೇನೆ. ಸರಿ ಹೇಳಿ ನೋಡೋಣ, ನಿಮ್ಮ ಸಾಹಿತ್ಯ